KAKB620000262021

Presented on : 22-01-2021
Registered on : 22-01-2021
Decided on : 19-05-2026
Duration : 5 years, 3 months, 28 days

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.**

**ಉಪಸ್ಥಿತರುಃ**

**ಶ್ರೀ ಕಾಶಿನಾಥ ವಿ. ಉಪ್ಪಾರ್**
ಬಿ.ಎಸ್.ಸಿ. ಎಲ್ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿ

**ಸಿ.ಸಿ.ನಂ.18/2021**

**ದಿನಾಂಕಃ 19ನೇ ಮೇ- 2026 ರಂದು**

**ಫಿರ್ಯಾದಿದಾರರುಃ**

ಕರ್ನಾಟಕ ರಾಜ್ಯ ಅಬಕಾರಿ ನಿರೀಕ್ಷಕರು, ಜೇವರ್ಗಿ

**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ದ -**

**ಆರೋಪಿತರುಃ** ರಂಗುಬಾಯಿ ಗಂಡ ಮಾಧು ಚವಾಣ
ವಃ 41 ವರ್ಷ, ಉಃ ಕೂಲಿ,
ಸಾಃ ಅಂಕಲಗಿ ತಾಂಡಾ, ತಾಃ ಜೇವರ್ಗಿ

**(ಆರೋಪಿತರ ಪರ ಶ್ರೀ ಎಸ್.ಎ.ಕೆ., ವಕೀಲರು)**

1. ಪ್ರಕರಣ ನಡೆದ ದಿನಾಂಕ : 19-03-2020
2. ಪ್ರಕರಣ ದಾಖಲಾದ ದಿನಾಂಕ : 19-03-2020
3. ಆರೋಪಿತರನ್ನು ಬಂಧಿಸಿದ ದಿನಾಂಕ: --
4. ಫಿರ್ಯಾದಿದಾರರ ಹೆಸರು : ಸೂಗುರೇಶ ತಂದೆ ಸಿದ್ರಾಮಪ್ಪ,

KAKB620000262021

ಅಬಕಾರಿ ಉಪ-ನೀರಿಕ್ಷಕರು

5. ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕ: 06-10-2022

6. ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕ: 19-01-2026

7. ಅಪಾದನೆಗಳು : ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 38(ಎ) ರಡಿಯಲ್ಲಿ.

8. ನ್ಯಾಯಾಧೀಶರ ತೀರ್ಮಾನ : ಅಂತಿಮ ಆದೇಶದಂತೆ

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

**ತೀರ್ಪು**

ಅಬಕಾರಿ ನಿರೀಕ್ಷಕರು ವಲಯ ಜೇವರ್ಗಿ ಇವರು ಆರೋಪಿತಳ ವಿರುದ್ದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 38(ಎ) ರಡಿಯಲ್ಲಿ ಶಿಕ್ಷಾರ್ಹ ಅಪಾದನೆಗಳಿಗಾಗಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಮೊಕದ್ದಮ್ಮೆಯ ಸಂಕ್ಷಿಪ್ತ ವಿವರಣೆಃ-**

ದಿನಾಂಕ 19-03-2020 ರಂದು ಮದ್ಯಾಹ್ನ 03-30 ಗಂಟೆ ಸುಮಾರಿಗೆ ಅಬಕಾರಿ ನಿರೀಕ್ಷಕರು ವಲಯ ಜೇವರ್ಗಿ, ಜೇವರ್ಗಿ ತಾಲೂಕಿನ ಅಂಕಲಗಿ ತಾಂಡಾದಲ್ಲಿ ಆರೋಪಿತಳು ತನ್ನ ಮನೆಯಲ್ಲಿ ಯಾವುದೇ ಪರವಾನಿಗೆ ಇಲ್ಲದೆ ಕಾನೂನು ಬಾಹಿರವಾಗಿ 1) 900 ಎಂ ಎಲ್ ನ 96 ಓರಿಜನಲ ಚಾಯ್ಸ ಟೇಟ್ರಾ ಪ್ಯಾಕೇಟಗಳು, 2) 180 ಎಂ ಎಲ್ ನ ಐ ಬಿ ವಿಸ್ಕಿಯ ಬಾಟಲಿಗಳು, 3) 330 ಎಂ ಎಲ್ ನ 19 ಕಿಂಗ ಫೀಶರ ಸ್ಟ್ರಾಂಗ ಬೀಯರ ಕ್ಯಾನಗಳು, ಸರಕಾರದಿಂದ ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಮಾರಾಟ

ಮಾಡಲು ಸಂಗ್ರಹಣೆ ಮಾಡಿರುತ್ತಾರೆಂದು ಆರೋಪಿತಳ ವಿರುದ್ದ ಫಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ಅಬಕಾರಿ ನಿರೀಕ್ಷಕರು ವಲಯ ಜೇವರ್ಗಿ ತಮ್ಮ ಠಾಣಾ ಗುನ್ನಾ ನಂ.04/2019-20 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತಳ ವಿರುದ್ದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 38(ಎ) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತಳ ವಿರುದ್ದ ಸಮನ್ಸ ಜಾರಿ ಮಾಡಿ, ಆರೋಪಿತಳ ಹಾಜರಾತಿಯನ್ನು ಪಡೆಯಲಾಯಿತು. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ಆರೋಪಣೆ ಪತ್ರದ ನಕಲು ಪ್ರತಿಯನ್ನು ಆರೋಪಿತಳಿಗೆ ನೀಡಿ, ಆರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 38(ಎ) ರಡಿಯಲ್ಲಿ ಆರೋಪಣೆಯನ್ನು ರಚಿಸಿ ಆರೋಪಿತಳಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತಳ ವಿರುದ್ದ ಅಪಾದಿಸಿದ ಮೇಲಿನ ಅಪರಾಧಗಳನ್ನು ಸಾಬೀತು ಪಡಿಸಲು ಪ್ರಾಸಾ-1 ರಿಂದ 4 ಜನರ ಸಾಕ್ಷಿಗಳ ವಿಚಾರಣೆ ಮಾಡಿಸಿದ್ದು, ನಿಶಾನೆ ಪಿ-1 ರಿಂದ 11 ದಾಖಲೆಗಳನ್ನು ಹಾಗೂ 05 ಮುದ್ದೆ ಮಾಲುನ್ನು ಮು ಮಾ-1 ಮತ್ತು ಮು ಮಾ-5 ಎಂದು

ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ಸಾಕ್ಷಿದಾರರ ವಿಚಾರಣೆಯಾದ ನಂತರ ದ.ಪ್ರ.ಸಂ.ಕಲಂ.313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿತರು ತಮ್ಮ ಪರವಾಗಿ ಸಾಕ್ಷಿ ವಿಚಾರಣೆಗೆ ಮುಂದಾಗಿರುವುದಿಲ್ಲ.

6. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

7. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತವೆ.

**ಅಂಶಗಳು**

1. ದಿನಾಂಕ 19-03-2020 ರಂದು ಮದ್ಯಾಹ್ನ 03-30 ಗಂಟೆ ಸುಮಾರಿಗೆ ಅಬಕಾರಿ ನಿರೀಕ್ಷಕರು ವಲಯ ಜೇವರ್ಗಿ, ಜೇವರ್ಗಿ ತಾಲೂಕಿನ ಅಂಕಲಗಿ ತಾಂಡಾದಲ್ಲಿ ಆರೋಪಿತಳು ತನ್ನ ಮನೆಯಲ್ಲಿ ಯಾವುದೇ ಪರವಾನಿಗೆ ಇಲ್ಲದೆ ಕಾನೂನು ಬಾಹಿರವಾಗಿ 1) 900 ಎಂ ಎಲ್ ನ 96 ಓರಿಜನಲ ಚಾಯ್ಸ ಟೇಟ್ರಾ ಪ್ಯಾಕೇಟಗಳು, 2) 180 ಎಂ ಎಲ್ ನ ಐ ಬಿ ವಿಸ್ಕಿಯ ಬಾಟಲಿಗಳು, 3) 330 ಎಂ ಎಲ್ ನ 19 ಕಿಂಗ ಫೀಶರ ಸ್ಟ್ರಾಂಗ ಬೀಯರ ಕ್ಯಾನಗಳು, ಸರಕಾರದಿಂದ ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಮಾರಾಟ ಮಾಡಲು ಸಂಗ್ರಹಣೆ ಮಾಡಿರುತ್ತಾರೆಂದು, ಆ ಮೂಲಕ ಆರೋಪಿತಳು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 38 (ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?
2. ಯಾವ ಆದೇಶ ಅಥವಾ ಶಿಕ್ಷೆ?

8. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

ಅಂಶ ನಂ.1 : ನಕರಾತ್ಮಕವಾಗಿ.

ಅಂಶ ನಂ.4 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

**ಕಾ ರ ಣ ಗ ಳು**

9. **ಅಂಶ ನಂ.1:-** ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರ ಮೇಲೆ ಅಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾಸಾ-1/ಪ್ರಾಸಾ-1 ಸೂಗುರೇಶ ಅಬಕಾರಿ ಉಪ-ನಿರೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 19-03-2020 ರಂದು ಮದ್ಯಾಹ್ನ 01-00 ಗಂಟೆಗೆ ತಾನು ಕರ್ತವ್ಯದಲ್ಲಿದ್ದಾಗ ಅಂಕಲಗಾ ತಾಂಡಾದಲ್ಲಿ ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾರೆಂದು ತಮ್ಮಗೆ ತನಗೆ ಬಾತ್ಮಿ ಬಂದ ಮೆರೆಗೆ ತಾನು, ಮತ್ತು ತಮ್ಮ ಚಾಲಕ ಖಲೀಲ ಅವರು ಕಚೇರಿಯಿಂದ ಹೊರಟು ಮಾರ್ಗಮದ್ಯದಲ್ಲಿ ತಮ್ಮ ಸಿಬ್ಬಂದಿಯಾದ ಚಾಸಾ-2, 3 ಅವರಿಗೆ ಫೋನ ಮುಖಾಂತರ ಕರೆ ಮಾಡಿ ಸ್ಥ,ಳಕ್ಕೆ ಬರುವಂತೆ ತಿಳಿಸಿ, ನಂತರ ನಾವೆಲ್ಲರೂ ಸೇರಿಕೂಂಡು ಅಂಕಲಗಾ ತಾಂಡಾಕ್ಕೆ ಹೋಗಿದೇವಸ್ಥಾನದ ಬಳಿಯಿದ್ದ, ಒಂದು ಮನೆಯಿಂದ ಒಬ್ಬ ಮಹಿಳೆ ಓಡಿ ಹೋದಳು, ನಂತರ ತಾವು ಸದರಿ ಮನೆಯನ್ನು ಪರಿಶೀಲಿಸಲಾಗಿ ಸದರಿ ಮನೆಯ ಬಾಗಿಲು ತೆರೆದಿತ್ತು, ಸದರಿ ಮನೆಯಲ್ಲಿ ಒಂದು ಬಿಳಿ ಚೀಲದಲ್ಲಿ ತಲಾ 90 ಎಂ ಎಲ್ ನ 96 ಓರಿಜನಲ ಚಾಯ್ಸ ವಿಸಕಿಯ ಪೌಚಗಳು, 180 ಎಂ ಎಲ್ ನ 09 ಐ ಬಿ ಬಾಟಲಿಗಳು ಕಿಂಗಫಿಶರ ಬಿಯರ ಕ್ಯಾನಗಳು ಇದ್ದವು, ನಂತರ ಸದರಿ ಮುದ್ದೆ ಮಾಲಿನಿಂದ ಎರಡು ಸಿ.ಸಿ.ನಂ.1008/2021 ಓ ಸಿ ಪೌಚಗಳು, ಒಂದು ಐ ಬಿ ಬಾಟಲಿ ಹಾಗೂ ಎರಡು ಕಿಂಗ ಫೀಶರ ಕ್ಯಾನಗಳು ರಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು ಅವುಗಳಿಗೆ ಚೀಟಿಯನ್ನು ಅಂಟಿಸಿ ಇಲಾಖೆಯ ಮುದ್ರೆಯನ್ನು ಹಾಕಲಾಯಿತು, ನಂತರ ಮುದ್ದೆ ಮಾಲು ಹಾಗೂ ಪಂಚನಾಮೆಯೊಂದಿಗೆ ಕಚೇರಿಗೆ ಬಂದು ಪ್ರಕರಣವನ್ನು ದಾಖಲು ಮಾಡಲಾಯಿತು, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಆರೋಪಿ ಪರ ವಕೀಲರು ಚಾಸಾ-1 ರವರನ್ನು ಪಾಟೀ

ಸವಾಲಿನಲ್ಲಿ ದಾಳಿ ಮಾಡುವ ಸಮಯದಲ್ಲಿ ನ್ಯಾಯಾಲಯದ ಪರವಾನಿಗೆ ಪಡೆದಿಲ್ಲವೆಂಬ ವಿಷಯವನ್ನು ಒಪ್ಪಿಕೊಳ್ಳುತ್ತಾರೆ. ಮುಂದುವರೆದು ಈ ಪ್ರಕರಣದಲ್ಲಿ ಜಪ್ತಿ ಪಂಚರು ಅಬಕಾರಿ ಇಲಾಖೆಯ ಅಧಿಕಾರಿಗಳಾಗಿದ್ದು, ಚಾಸಾ-1 ಅವರು ತಮ್ಮ ಪಾಟೀ ಸವಾಲಿನಲ್ಲಿ ಜಪ್ತಿ ಪಂಚನಾಮೆಯಲ್ಲಿ ದಾಳಿ ಮಾಡುವ ಸಮಯದಲ್ಲಿ ಸಾರ್ವಜನಿಕರು ಪಂಚರಾಗಲು ಒಪ್ಪಲಿಲ್ಲ ಎಂಬ ವಿಷಯವನ್ನು ಬರೆದಿಲ್ಲವೆಂಬ ಸೂಚನೆಯನ್ನು ಒಪ್ಪಿಕೊಳ್ಳುತ್ತಾರೆ. ಆರೋಪಿತಳಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಆರೋಪಿತಳ ವಿರುದ್ದ ಸುಳ್ಳು ದೂರನ್ನು ನೀಡಿರುತ್ತಾರೆಂಬ ಸೂಚನೆಯನ್ನು ನಿರಾಕರಿಸಿರುತ್ತಾರೆ.

10. ಚಾಸಾ-3/ಪ್ರಾಸಾ-4 ಮಹಿಬೂಬ ಪಟೇಲ ಅಬಕಾರಿ ಮುಖ್ಯ ಪೆದೆ, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 19-03-2020 ರಂದು ಮದ್ಯಾಹ್ನ 03- 15 ಗಂಟೆಯ ಸಮಯದಲ್ಲಿ ತಾನು, ಚಾಸಾ-2 ಅವರು ಕಚೇರಿಯಲ್ಲಿದ್ದಾಗ ಚಾಸಾ-1 ಅವರು ಅಂಕಲಗಾ ತಾಂಡಾದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದಿರುತ್ತದೆಂದು ತಮಗೆ ತಿಳಿಸಿರುತ್ತಾರೆ, ನಂತರ ಚಾಸಾ-1 ಅವರು ತನಗೆ ಮತ್ತು ಚಾಸಾ-3 ಅವರಿಗೆ ಸ್ಥ,ಳಕ್ಕೆ ಬರುವಂತೆ ತಿಳಿಸಿದ್ದು, ತಾನು ಮತ್ತು ಚಾಸಾ-2 ಅವರು ಗುನ್ನಾ ಜಾಗಕ್ಕೆ ಹೋಗಿರುತ್ತೇವೆ, ಅಲ್ಲಿ ಒಂದು ಮನೆಯಿಂದ ಒಬ್ಬ ಮಹಿಳೆ ಓಡಿ ಹೋದಳು, ನಂತರ ತಾವು ಸದರಿ ಮನೆಯನ್ನು ಪರಿಶೀಲಿಸಲಾಗಿ ಸದರಿ ಮನೆಯ ಬಾಗಿಲಿನ ಹಿಂದುಗಡೆ ಒಂದು ಬಿಳಿ ಚೀಲದಲ್ಲಿ ತಲಾ 90 ಎಂ ಎಲ್ ನ 96 ಓರಿಜನಲ ಚಾಯ್ಸ ವಿಸಕಿಯ ಪೌಚಗಳು, 180 ಎಂ ಎಲ್ ನ 09 ಐ ಬಿ ಬಾಟಲಿಗಳು, 330 ಎಂ ಎಲ್‌ನ ಕಿಂಗಫಿಶರ ಬಿಯರ 19 ಕ್ಯಾನಗಳು ಇದ್ದವು, ನಂತರ ಸದರಿ ಮುದ್ದೆ

ಮಾಲಿನಿಂದ ಎರಡು ಓ ಸಿ ಪೌಚಗಳು, ಒಂದು ಐ ಬಿ ಬಾಟಲಿ ಹಾಗೂ ಎರಡು ಕಿಂಗ ಫೀಶರ ಕ್ಯಾನಗಳು ರಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು ಅವುಗಳಿಗೆ ಚೀಟಿಯನ್ನು ಅಂಟಿಸಿ ಇಲಾಖೆಯ ಮುದ್ರೆಯನ್ನು ಹಾಕಲಾಯಿತು, ನಂತರ ಮುದ್ದೆ ಮಾಲು ಹಾಗೂ ಪಂಚನಾಮೆಯೊಂದಿಗೆ ಕಚೇರಿಗೆ ಬಂದು ಪ್ರಕರಣವನ್ನು ದಾಖಲು ಮಾಡಲಾಯಿತು, ದಿನಾಂಕ 25-04-2020 ರಂದು ಚಾಸಾ-7 ಅವರನ್ನು ಆರೋಪಿ ಪತ್ತೆ ಕುರಿತು ನೇಮಿಸಿರುತ್ತಾರೆ, ದಿನಾಂಕ 27-04-2020 ರಂದು 4 ಸಿ.ಸಿ.ನಂ.1008/2021 ಆರೋಪಿ ಪತ್ತೆ ಕುರಿತು ವರದಿ ನೀಡಿರುತ್ತೇನೆ, ದಿನಾಂಕ 30-07-2020 ರಂದು ಆರೋಪಿ ಪತ್ತೆಯಾಗದ ಕಾರಣ ಆ ಬಗ್ಗೆ ವರದಿ ನೀಡಿರುತ್ತೇನೆ, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಚಾಸಾ-3 ಅವರನ್ನು ಆರೋಪಿ ಪರ ವಕೀಲರು ದಿರ್ಘವಾದ ಪಾಟೀ ಸವಾಲು ಮಾಡಿದ್ದು, ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂಬ ಸೂಚನೆಯನ್ನು ನಿರಾಕರಿಸಿರುತ್ತಾರೆ.

11. ಚಾಸಾ-4/ಪ್ರಾಸಾ-2 ಶಂಕರಲಿಂಗ ಅಬಕಾರಿ ಮುಖ್ಯ ಪೆದೆ, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 24-07-2020 ರಂದು ಸದರಿ ಪ್ರಕರಣದಲ್ಲಿ ಜಪ್ತಿ ಪಡಿಸಿಕೂಂಡ ಮುದ್ದೆ ಮಾಲುಗಳನ್ನು ಚಾಸಾ-7 ಅವರ ನಿರ್ದೇಶನದ ಮೆರೆಗೆ ರಸಾಯನಿಕ ಪರೀಕ್ಷಗಾಗಿ ಚಾಸಾ-6 ಅವರ ಕಚೇರಿಗೆ ತೆಗೆದುಕೂಂಡು ಹೋಗಿ ಆ ಕುರಿತು ಚಾಸಾ-7 ಅವರಿಗೆ ವರದಿಯನ್ನು ಸಲ್ಲಿಸಿರುತ್ತೇನೆ, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಆರೋಪಿಗೆ ಸಹಾಯವಾಗುವ ಯಾವುದೇ ಪೂರಕವಾದ ಅಂಶಗಳು ದೊರೆತಿರುವುದಿಲ್ಲ.

12. ಚಾಸಾ-2 ಅವರ ಸಾಕ್ಷಿಯನ್ನು ಸಹಾಯಕ ಸರಕಾರಿ ಅಭಿಯೋಜಕರ ಒಪ್ಪಿಗೆಯ ಮೇರೆಗೆ ಕೈಬಿಡಲಾಗಿರುತ್ತದೆ. ಆರೋಪಿ ಪರ ವಕೀಲರ ಒಪ್ಪಿಗೆಯ

ಮೆರೆಗೆ ರಸಾಯನಿಕ ಪರೀಕ್ಷಾ ವರದಿಯನ್ನು ನಿಪಿ-5 ಎಂದು ಗುರುತಿಸಿದ್ದು, ಚಾಸಾ-6 ಅವರ ಸಾಕ್ಷಿಯನ್ನು ಆರೋಪಿ ಪರ ವಕೀಲರ ಒಪ್ಪಿಗೆಯ ಮೆರೆಗೆ ಕೈಬಿಡಲಾಗಿರುತ್ತದೆ.

13. ಚಾಸಾ-7/ಪ್ರಾಸಾ-3 ನಿಂಗನಗೌಡ ಅಬಕಾರಿ ನಿರೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 24-04-2020 ರಂದು ಈ ಪ್ರಕರಣದ ಕಡತವನ್ನು ಚಾಸಾ-1 ಅವರಿಂದ ಪಡೆದು ದಿನಾಂಕ 24-07-2020 ರಂದು ಪ್ರಕರಣದಲ್ಲಿ ವಶಪಡಿಸಿಕೂಂಡ ಮುದ್ದೆ ಮಾಲುಗಳನ್ನು ರಸಾಯನಿಕ ವರದಿಗಾಗಿ ಚಾಸಾ-4 ಅವರ ಮುಖಾಂತರ ಕಳುಹಿಸಿರುತ್ತೇನೆ, ದಿನಾಂಕ 25-07-2020 ರಂದು ರಸಾಯನಿಕ ವರದಿಯನ್ನು ಪಡೆದಿರುತ್ತೇನೆ, ದಿನಾಂಕ 25-04-2020 ರಂದು ಚಾಸಾ-5 ಅವರನ್ನು ಆರೋಪಿ ಪತ್ತೆ ಕುರಿತು ನಿಯೋಜನೆ ಮಾಡಿರುತ್ತೇನೆ, ದಿನಾಂಕ 27-04-2020 ರಂದು ಮತ್ತು 30-07-2020 ರಂದು ಚಾಸಾ-5 ಅವರಿಂದ ಆರೋಪಿ ಪತ್ತೆ ಕುರಿತು ವರದಿಗಳನ್ನು ಪಡೆದಿರುತ್ತೇನೆ, ದಿನಾಂಕ 05-08-2020 ರಂದು ಆರೋಪಿತನ ಮನೆಯ ಮಾಲೀಕತ್ವದ ಕುರಿತು ಪಿ ಡಿ ಓ ಅಂಕಲಗಿ ಅವರಿಗೆ ಪತ್ರ ಬರೆದಿರುತ್ತೇನೆ,3 ಸಿ.ಸಿ.ನಂ.1008/2021 ದಿನಾಂಕ 11-08-2020 ರಂದು ಪಿ ಡಿ ಓ ಅಂಕಲಗಿ ಅವರಿಂದ ವರದಿಯನ್ನು ಪಡೆದಿರುತ್ತೇನೆ, ಗುನ್ನಾ ಜಾಗೆಯ ಮನೆಯು ಆರೋಪಿಗೆ ಸೇರಿದು ಎಂದು ವರದಿ ನೀಡಿರುತ್ತಾರೆ, ದಿನಾಂಕ 12-08-2020 ರಂದು ತನಿಖೆ ಮುಗಿಸಿ ಆರೋಪಿತನ ವಿರುದ್ದ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತೇನೆ, ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಚಾಸಾ-7 ಅವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿನಲ್ಲಿ ಘಟನೆಯ ನಂತರ ಘಟನಾ ಸ್ಥಳಕ್ಕೆ ಹೋಗಿಲ್ಲವೆಂಬ ಸೂಚನೆಯನ್ನು ಒಪ್ಪಿಕೊಳ್ಳುತ್ತಾರೆ. ಮತ್ತು ಈ ಪ್ರಕರಣದಲ್ಲಿ ಎಲ್ಲಾ

ಸಾಕ್ಷಿದಾರರು ಅಬಕಾರಿ ಇಲಾಖೆ ಸಾಕ್ಷಿದಾರರಾಗಿರುತ್ತಾರೆಂದು ಒಪ್ಪಿಕೊಳ್ಳುತ್ತಾರೆ.

14. ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮುದ್ದೆ ಮಾಲುಗಳ ಆರೋಪಿತಳಿಗೆ ಸಂಬಂಧಿಸಿದೆಂದು ರುಜುವಾತು ಪಡಿಸುವ ಹೊಣೆಗಾರಿಕೆ ಅಭಿಯೋಜನೆಯ ಮೇಲೆ ಇರುತ್ತದೆ. ಸದರಿ ಅಂಶವನ್ನು ರುಜುವಾತು ಪಡಿಸಲು ಅಭಿಯೋಜನೆಯು ಒಟ್ಟು ನಾಲ್ಕು ಜನ ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ. ಆದರೆ ಈ ಪ್ರಕರಣದಲ್ಲಿ ಎಲ್ಲಾ ಸಾಕ್ಷಿದಾರರು ಅಬಕಾರಿ ಇಲಾಖೆಯ ಅಧಿಕಾರಿಗಳಾಗಿರುತ್ತಾರೆ. ಆದ್ದರಿಂದ ಪ್ರಾಸಾ-1 ರಿಂದ ಪ್ರಾಸಾ-4 ಅವರ ಸಾಕ್ಷಿಗಳನ್ನು ನಂಬಲು ಅನರ್ಹವಾಗಿರುತ್ತದೆ. ಈ ಪ್ರಕರಣದಲ್ಲಿ ತಲಾ 90 ಎಂ ಎಲ್ ನ 96 ಓರಿಜನಲ ಚಾಯ್ಸ ವಿಸಕಿಯ ಪೌಚಗಳು, 180 ಎಂ ಎಲ್ ನ 09 ಐ ಬಿ ಬಾಟಲಿಗಳು ಕಿಂಗಫಿಶರ ಬಿಯರ ಕ್ಯಾನಗಳು ವಶಪಡಿಸಿಕೊಂಡಿದ್ದಾರೆಂದು ತಮ್ಮ ಪಂಚನಾಮೆಯಲ್ಲಿ ಬರೆಯಿಸಿರುತ್ತಾರೆ. ಆದರೆ ಸದರಿ ಮುದ್ದೆ ಮಾಲಿನಲ್ಲಿ 90 ಎಂ ಎಲ್ ನ 02 ಓರಿಜನಲ ಚಾಯ್ಸ ವಿಸಕಿಯ ಪೌಚಗಳು, 180 ಎಂ ಎಲ್ ನ 01 ಐ ಬಿ ಬಾಟಲಿ ಮತ್ತು ಕಿಂಗಫಿಶರ ಬಿಯರ ಮತ್ತು ಕಿಂಗ ಫಿಶರ ಸ್ಟ್ರಾಂಗ ಬಿಯ 330 ಎಂ ಎಲ್ ನ ಎರಡು ಕ್ಯಾನಗಳನ್ನು ಮಾತ್ರ ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು ಕೊಂಡಿದ್ದಾರೆಂದರು ತಮ್ಮ ಪಂಚನಾಮೆಯಲ್ಲಿ ಬರೆಯಿಸಿರುತ್ತಾರೆ. ಆದರೆ ಈ ಹಂತದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪನಲ್ಲಿ ಈ ಕೇಳಗಿನಂತೆ ಹೇಳಿರುತ್ತಾರೆಃ

It is also relevant to refer the ratio laid down by the Hon’ble High Court of Karnataka

which is reported in ILR 2012 Kar 2627 in between (Sri.M.R.Manjunath V/s. The Authorized Officer and Deputy Commissioner of Excise, Chickmagalur District and Another) wherein the Hon'ble High Court of Karnataka has clearly held that out of 33 sachets of 100 ml., recovered from the petitioner, only one sachet was sent to the chemical analyst and the chemical analysis report was also not marked in the proceedings. Further held that when the other remaining 32 sachets were not sent to the chemical examiner, the conviction of the accused is not maintainable.

15. ಮಾನ್ಯ ಉಚ್ಚ ನ್ಯಾಯಾಲಯದ ಈ ತೀರ್ಪನ್ನು ಸದರಿ ಪ್ರಕರಣಕ್ಕೆ ಅನ್ವಯಿಸಿ ನೋಡಿದಾಗ ಚಾಸಾ-1 ರವರು ವಶಪಡಿಸಿಕೊಂಡ ಮುದ್ದೆ ಮಾಲುಗಳಿಂದ ಕೇವಲ 90 ಎಂ ಎಲ್ ನ 02 ಓರಿಜನಲ ಚಾಯ್ಸ ವಿಸಕಿಯ ಪೌಚಗಳು, 180 ಎಂ ಎಲ್ ನ 01 ಐ ಬಿ ಬಾಟಲಿ ಮತ್ತು ಕಿಂಗಫಿಶರ ಬಿಯರ ಮತ್ತು ಕಿಂಗ ಫಿಶರ ಸ್ಟ್ರಾಂಗ ಬಿಯ 330 ಎಂ ಎಲ್ ನ ಎರಡು ಕ್ಯಾನಗಳನ್ನು ಸ್ಯಾಂಪಲಗಳನ್ನು ರಸಾಯನಿಕ ಪರೀಕ್ಷೆಗಾಗಿ ತೆಗೆದಿರುತ್ತಾರೆ. ಆದ್ದರಿಂದ ಉಳಿದ ಪ್ಯಾಕೇಟಗಳಲ್ಲಿ ಮದ್ಯವಿತ್ತು ಎಂಬುದನ್ನು ಸಾಭೀತು ಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ. ಆದ್ದರಿಂದ ಈ ಪ್ರಕರಣದಲ್ಲಿ ತನಿಖೆಯು ದೋಷಪೂರಿತವಾಗಿರುವುದರಿಂದ ಸಂಶಯದ ಲಾಭವನ್ನು

ಆರೋಪಿಗೆ ನೀಡಿದ್ದು, ಕಾರಣ ಅಂಶ ನಂ.1 ನೇದ್ದನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.

16. **ಅಂಶ ನಂ.2:-** ಅಂಶ ನಂ.1 ನೇದ್ದನ್ನು ನಕರಾತ್ಮಕವಾಗಿ ಉತ್ತರಿಸಿರುವುದರಿಂದ, ಈ ಕೆಳಗಿನಂತೆ ಅಂತಿಮವಾಗಿ ಆದೇಶಿಸಿರುತ್ತೇನೆ.

## ಆ ದೇ ಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 255 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿತನನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 38(ಎ) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗೆ ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತನ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಭದ್ರತೆಗಳನ್ನು 6 ತಿಂಗಳವರೆಗೆ ವಿಸ್ತರಿಸಲಾಗಿದೆ.

ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ ಮು ಮಾ-1 ರಿಂದ ಮು ಮಾ-3 ಗಳು ಮೌಲ್ಯರಹಿತವಾಗಿರುವುದರಿಂದ ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ಮೇಲೆ ನಾಶಪಡಿಸಲು ಈ ಮೂಲಕ ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 19ನೇ ಮೇ-2026 ರಂದು ತೀರ್ಪನ್ನು ಘೋಷಿಸಲಾಯಿತು)

**(ಶ್ರೀ ಕಾಶಿನಾಥ ವಿ. ಉಪ್ಪಾರ್)**
ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿ.

KAKB620000262021

**<u>ಅನುಬಂಧ</u>**

**<u>ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ</u>**

ಪಿ.ಡಬ್ಲ್ಯೂ-1 : ವಿಠಲರಾವ ತಂದೆ ಮಹಾದೇವ, ಅಬಕಾರಿ ನೀರಿಕ್ಷಕರು

ಪಿ.ಡಬ್ಲ್ಯೂ-2 : ಶರಣಬಸಪ್ಪ ತಂದೆ ಶ್ರೀಪತಿ

ಪಿ.ಡಬ್ಲ್ಯೂ-3 : ಗುರಣ್ಣ ತಂದೆ ನಿಂಗಪ್ಪ

ಪಿ.ಡಬ್ಲ್ಯೂ-4 : ಎಸ್ಜಿ.ಶಾಂತಕುಮಾರ ತಂದೆಗೋವಿಂದಪ್ಪ, ನಿವೃತ್ತ ಪಿ ಎಸ್ ಐ

**<u>ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ</u>**

| | | | |
|---|---|---|---|
| ನಿ.ಪಿ.1 | | : | ಶೋಧನಾ ವಾರಂಟ |
| ನಿ.ಪಿ.1 | (ಎ) | : | ಪ್ರಾಸಾ-1 ರವರ ಸಹಿ |
| ನಿ.ಪಿ.2 | | : | ಪಂಚನಾಮೆ |
| ನಿ.ಪಿ.2 | (ಎ) | : | ಪ್ರಾಸಾ-1 ರವರ ಸಹಿ |
| ನಿ.ಪಿ.2 | (ಬಿ) | : | ಪ್ರಾಸಾ-2 ರವರ ಸಹಿ |
| ನಿ.ಪಿ.2 | (ಸಿ) | : | ಪ್ರಾಸಾ-3 ರವರ ಸಹಿ |
| ನಿ.ಪಿ.3 | | : | ವರದಿ |
| ನಿ.ಪಿ.3 | (ಎ) | : | ಪ್ರಾಸಾ-1 ರವರ ಸಹಿ |
| ನಿ.ಪಿ.4 | | : | ಪ್ರಥಮ ವರ್ತಮಾನ ವರದಿ |
| ನಿ.ಪಿ.4 | (ಎ) | : | ಪ್ರಾಸಾ-1 ರವರ ಸಹಿ |
| ನಿ.ಪಿ.5 | | : | ರಸಾಯನಿಕ ಪರೀಕ್ಷಾ ವರದಿ |

**<u>ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ</u>**

- ಇಲ್ಲ -

**<u>ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ</u>**

- ಇಲ್ಲ -

**<u>ಅಭಿಯೋಜನೆ ಪರವಾಗಿ ಗುರ್ತಿಸಲಾದ ಮುದ್ದೆಮಾಲುಗಳ ವಿವರ</u>**

ಮುಮಾ-1 : 180 ಎಂ ಎಲ್ ನ ಆಫಿಸರ ಚಾಯ್ಸ ವಿಸ್ಕಿಯ ಟೇಟ್ರಾ ಪ್ಯಾಕೇಟ

ಮುಮಾ-2 : 180 ಎಂ ಎಲ್ ನ ಎಂ ಸಿ ರಂ ಟೇಟ್ರಾ ಪ್ಯಾಕೇಟ

KAKB620000262021

ಮುಮಾ-3 :  180 ಎಂ ಎಲ್ ನ  ಐ ಬಿ ವಿಸ್ಕಿಯ ಬಾಟಲಿ

ಮುಮಾ-4 :  180 ಎಂ ಎಲ್ ನ ಎಂ ಸಿ ರಂ ಟೇಟ್ರಾ ಪ್ಯಾಕೇಟ

ಮುಮಾ-5 :  180 ಎಂ ಎಲ್ ನ  ಬಿ ಪಿ ಟೇಟ್ರಾ ಪ್ಯಾಕೇಟ

ಮುಮಾ-6 :  180 ಎಂ ಎಲ್ ನ  ಓ ಟಿ ವಿಸ್ಕಿಯ ಟೇಟ್ರಾ ಪ್ಯಾಕೇಟ

ಮುಮಾ-7 :  180 ಎಂ ಎಲ್ ನ ಆಫಿಸರ ಚಾಯ್ಸ ವಿಸ್ಕಿಯ ಟೇಟ್ರಾ ಪ್ಯಾಕೇಟ

ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

Dictated on : 19-05-2026
Transcribed on : 19-05-2026
checked on : 19-05-2026
Signed on : 19-05-2026

KASHINATH VASANT UPPAR

Digitally signed by KASHINATH VASANT UPPAR
Date: 2026.05.23 08:39:22 +0530

(**Kashinath V. Uppar**)
**CIVIL JUDGE JMFC, Jewargi.**

Visit **ecourts.gov.in** for updates or download mobile app "**eCourts Services**" from Android or iOS